

ಮುಂದೆ ಅಕ್ಷರಗಳನ್ನು ಬರೆಯುವಿಕೆಗೆ ಬುನಾದಿ. ಮನಸೋ ಇಚ್ಛೆ ಸ್ಕ್ರಿಬ್ಲ್ ಅಥವಾ ಗೀಚಿ ಬರೆದ ಮಕ್ಕಳಿಗೆ ಇಂಗ್ಲಿಷ್‌ನ ಕರ್ಸೀವ್ ಲೆಟರ್ಸ್ ಬರೆಯಲು ಸುಲಭವಾಗಿದೆ ಎನ್ನುತ್ತದೆ ಒಂದು ಸಂಶೋಧನೆ. ಬರೆಯುವ ಮಕ್ಕಳಲ್ಲಿ ಹೆಚ್ಚೆಚ್ಚು ಹಾಗಾಗಿ ಮಕ್ಕಳ ಗೀಚುವಿಕೆಯನ್ನು ಅರಿತು ಪ್ರೋತ್ಸಾಹ ನೀಡೋಣ.

ಚಿಕ್ಕಮಕ್ಕಳು ಗೋಡೆಯ ಮೇಲೆ ಬರೆದಾಗ ತಕ್ಷಣಕ್ಕೆ ಮಕ್ಕಳ ಮೇಲೆ ರೇಗದಿರಿ. ಮಕ್ಕಳ ಗೀಚುವಿಕೆಯ ವಯಸ್ಸು ತಾತ್ಕಾಲಿಕ. ಹಾಗಾಗಿ ತಕ್ಷಣಕ್ಕೆ ಅವರ ಮನಸ್ಸಿಗೆ ಘಾಸಿಯಾಗುವಂತೆ ಬೈಯುವುದು, ಇತರರ ಎದುರು ಅವಮಾನಿಸುವುದು ಬೇಡ. ಆಗ ಗೀಚುವ ಆಸೆಗೆ ಕದ್ದು ಗೋಡೆಯ ಮೇಲೆ ಬರೆಯಲು ಆರಂಭಿಸುತ್ತಾರೆ. ಅದರ ಬದಲು ನಿಮ್ಮ ಮಕ್ಕಳ ಚಿತ್ರಗಳನ್ನು ಅವರ ಬರೆದ ವಯಸ್ಸನ್ನು ನೆನಪಿನಲ್ಲಿಟ್ಟುಕೊಂಡು ಹೆಮ್ಮೆ ಪಡಿ. ಮಕ್ಕಳು ದೊಡ್ಡವರಾದಂತೆ ಇತರ ಬರೆಯುವ ಮಾಧ್ಯಮಗಳು ಸಿಕ್ಕ ನಂತರ ಗೋಡೆ ಮೇಲೆ ಬರೆಯಬಾರದೆಂಬುದನ್ನೂ ತಿಳಿದುಕೊಳ್ಳುತ್ತಾರೆ.

ಇದಾಗಿಯೂ ಮನೆಯ ಗೋಡೆಯ ಅಂದ ಹಾಳಾಗುವ ಕುರಿತು ಚಿಂತೆಯಿದ್ದರೆ, ಮಕ್ಕಳಿಗೆ ಬರೆಯಬೇಕೆನಿಸಿದ ಕ್ಷಣಕ್ಕೆ, ಸ್ಲೇಟು, ವೈಟ್ ಬೋರ್ಡ್, ಪೇಪರ್ ಇನ್ನಿತರ ಪರ್ಯಾಯ ವಸ್ತುಗಳನ್ನು, ಬಣ್ಣದ ಪೆನ್ಸಿಲ್, ಬಳಪ, ಮಕ್ಕಳು ಬಳಸಬಹುದಾದಂತಹ ಪೈಂಟ್ ಇತ್ಯಾದಿ ಪರ್ಯಾಯ ವಸ್ತುಗಳಿಂದ ಬೇರೆಡೆಗೆ ಆಕರ್ಷಿಸಿ ಅವರಿಗೆ ಗೀಚಲು ಅವಕಾಶ ನೀಡಿ. ಅವರಲ್ಲಿನ ಬರೆಯುವ ದಾಹ ನೀಗಬೇಕು. ಸಂತೃಪ್ತಿ ಎನಿಸಿದಾಗ ಮಕ್ಕಳು ಕೂಡ ಹೆಚ್ಚಿನ ಹಠ ಮಾಡುವುದಿಲ್ಲ. ಜೊತೆಗೆ ನಿಮ್ಮ ಪ್ರೋತ್ಸಾಹ ಅವರಲ್ಲಿ ಇನ್ನೂ ಹೆಚ್ಚಿನ ಆತ್ಮವಿಶ್ವಾಸಕ್ಕೆ ಸಹಾಯಕವಾಗುತ್ತದೆ.

ಮಕ್ಕಳ ಚಿತ್ರ ಅಸಂಬದ್ಧವೆನಿಸಿದರೂ, 'ಇದೇನು ಬರೀ ಗೀಚಿದ್ದೀಯ' ಎಂಬ ಅವಹೇಳನೆ ಬೇಡ. ಮಕ್ಕಳ ಪ್ರಯತ್ನಕ್ಕೆ ಭರಪೂರ ಪ್ರಶಂಸೆ ನೀಡಿ. ಮಕ್ಕಳೊಡನೆ ಚಿತ್ರಗಳನ್ನು ಬರೆಯಲು ಅಥವಾ ನೋಡಲು ಸ್ವಲ್ಪ ಸಮಯ ವ್ಯಯಿಸಿ. ಅದೇನು ಬರೆದಿದ್ದೀಯ ಎಂದು ವಿಚಾರಿಸಿ, ಮಕ್ಕಳ ಕಲ್ಪನೆಗೆ ಒಂದಷ್ಟು ನಿಮ್ಮ ಒಲವು, ಹುಸಿ ಆಶ್ಚರ್ಯವನ್ನು ವ್ಯಕ್ತಪಡಿಸಿ. ಹೆಚ್ಚೆಚ್ಚು ನೀವು ಕುತೂಹಲದಿಂದ ಪ್ರಶ್ನಿಸಿದಂತೆಯೂ, ಮಕ್ಕಳ ಮೆದುಳಿನಲ್ಲಿ ಇನ್ನೂ ಸಾಕಷ್ಟು ಕ್ರಿಯಾತ್ಮಕ ಐಡಿಯಾಗಳು ಬರುತ್ತಾ ಹೋಗುತ್ತವೆ. ಇದು ಮಕ್ಕಳ ಅತ್ಯುತ್ತಮ ಬೆಳವಣಿಗೆಗೆ ಸಹಕಾರಿ.

ಮಕ್ಕಳಿಗೆ ಭೌತಿಕವಾಗಿ ಚಿತ್ರಿಸುವ ಸಾಮಗ್ರಿಗಳನ್ನು ನೀಡಿ. ಪೈಂಟ್ ಡ್ರಾಯಿಂಗ್ ಚಿತ್ರದ ಆಕರ್ಷಣೆ ಮೊಬೈಲ್ ಟ್ಯಾಬ್ ನಲ್ಲೂ ಸಾಧ್ಯ. ಆದರೆ ತೋರು ಬೆರಳಿನಿಂದ ಸ್ಮಾರ್ಟ್ ಸ್ಕ್ರೀನನ್ನು ಮುಟ್ಟಿ ಮುಗಿಸುವ ಚಿತ್ರದಿಂದ ನಿಜವಾದ ಕಲಿಕೆಯಾಗುವುದಿಲ್ಲ. ಮಕ್ಕಳಿಗೆ ಮುಂದಕ್ಕೆ ಚಿತ್ರ ಅಥವಾ ಅಕ್ಷರಗಳನ್ನು ಪೆನ್ನು ಪೆನ್ಸಿಲ್ ಹಿಡಿದು ಬರೆಯುವ ಕಲ್ಪನೆಗೆ, ಬಣ್ಣಗಳನ್ನು ಬಳಸಿ ಮೂಡಿಸುವ ಚಿತ್ರಕ್ಕೆ ಸ್ಥಳ ವ್ಯಾಪ್ತಿ, ಆಯಾಮಗಳ ಅಂದಾಜು ಸಿಗುವುದಿಲ್ಲ.

4 ವರ್ಷದ ಮಕ್ಕಳಲ್ಲಿ ತನಗಿಂತ ತನ್ನ ಗೆಳೆಯ/ಗೆಳತಿಯರು ಬರೆದ ಚಿತ್ರ ಚೆನ್ನಾಗಿ ಮೂಡಿಬಂದರೆ ಅಥವಾ ತಾನು ಕಲ್ಪಿಸಿದಂತೆ ಚಿತ್ರಿಸಲು ಬರುತ್ತಿಲ್ಲ ಎಂಬ ಹತಾಶೆ ಮೂಡಿದರೆ ಕಿರಿಕಿರಿ ಆಗುವುದುಂಟು. ಹಾಗಾಗಿ ಮಕ್ಕಳ ಚಿತ್ರಗಳಿಗೆ ಇತರರ ಚಿತ್ರಗಳನ್ನು ತುಲನೆ ಮಾಡದಿರಿ. ಯಾರೂ ಹುಟ್ಟಿನಿಂದ ಕಲಾವಿದ ಆಗಿರುವುದಿಲ್ಲ. ಇನ್ನೂ ಚೆನ್ನಾಗಿ ಬರೆಯಬೇಕಿತ್ತು ಎಂದು ಒತ್ತಡ ಹೇರದಿರಿ. ಸಮಾಧಾನಿಸಿ ಮಕ್ಕಳ ಅಷ್ಟರ ಮಟ್ಟಿಗಿನ ಪ್ರಯತ್ನಕ್ಕೆ ಸಂತೋಷ ವ್ಯಕ್ತಪಡಿಸಿ.

ಮಕ್ಕಳೇನಾದರೂ ಆಸಕ್ತಿಯಿಂದ ಗೀಚುತ್ತ ಕುಳಿತಿದ್ದರೆ, ಅದು ಸಮಯ ವ್ಯರ್ಥ ಎಂದೆಣಿಸಬೇಡಿ. ಹೆಚ್ಚೆಚ್ಚು ಗೀಚಿ ಬರೆಯುವುದರಿಂದ ಹೆಚ್ಚಿನ ಮಕ್ಕಳ ಮನಸ್ಸಿನ ಯೋಚನೆಗಳು ಹೊರಹೊಮ್ಮುತ್ತದೆ. ಇದೊಂದು **expressive** ಮಾಧ್ಯಮವಾದುದ್ದರಿಂದ ಮಕ್ಕಳು ತಾವಾಗಿಯೇ ತಮ್ಮ ಸಮಯವನ್ನು ತೊಡಗಿಸುವ ವಿಧಾನವನ್ನು ಕಲಿಯುತ್ತಾರೆ. ಅವರ ಹಠಮಾರಿತನವೂ ಕಡಿಮೆಯಾಗುತ್ತದೆ.